ರೂಮಿನಲ್ಲಿ ಮೂರು ದಿನ ಪರ್ಯಂತರ ಬರಿ ನೀರು ಕುಡಿದುಕೊಂಡು ಕುಡಿದ ನೀರನ್ನೆಲ್ಲ ಕಣ್ಣಲ್ಲಿ ಹರಿಸುತ್ತ ಲಗ್ನವಾಗುತ್ತೇನೆಂದು ಕರೆದುಕೊಂಡು ಬಂದವನಿಗಾಗಿ ಕಾಯ್ದಳು. ಯಾವಾಗ ರೂಮಿನಲ್ಲಿ ಹುಡುಗಿ ಒಬ್ಬಳೇ ಆದಳೋ ಹುಡುಗರ ಓಡಾಟ ಜಾಸ್ತಿಯಾಯಿತು. ಆಗಲೀಗ ಹೋಟೆಲ್ ಯಜಮಾನ ಮಾದೇವಿಯನ್ನು ಕರೆಸಿ ತಾನೇ ಚಾರ್ಜು ಕೊಟ್ಟು ಸಪ್ಲೈಯರ್ ಒಬ್ಬನ ಜತೆ ಮಾಡಿ ಊರಿಗೆ ಬಿಡಿಸಿದ.

ಊರಿಗೆ ಬಂದ ಸಂಜೆ ಮಾದೇವಿಯನ್ನು ಅಪ್ಪ ಅವ್ವನೇ ಆದಿಯಾಗಿ ಮನೆಯವರೆಲ್ಲ ಹೊಡಿದು, ಮೈಯ್ಯ ಮಾಂಸವನ್ನೆಲ್ಲ ಕರಗಿಸಿ, ಬರಿಯ ಮೂಳೆ ಉಳಿಯುವಂತೆ ಮಾಡಿದರು. ಮುಕ್ಕಾಲುಪಾಲು ಸತ್ತುಬಿದ್ದವಳನ್ನು ಅವಳ ಅಪ್ಪ ಎತ್ತಿ ಬಾವಿಗೆ ಬಿಸಾಡಿಬಿಟ್ಟರೆ ಹೇಗೆ, ಇಲ್ಲದಿದ್ದರೆ ಕೊಂದು ಮೂಟೆ ಕಟ್ಟಿ ಕಾಡಿನಲ್ಲಿ ಹಾಕಿ ಬಿಟ್ಟರೆ ತಂಟೆಯಿಲ್ಲ ಎಂದೆಲ್ಲ ಯೋಚಿಸಿದ. ಆದರೆ ಹಾಗೇನೂ ಆಗದೆ ಮಾದೇವಿ ಮನೆಯಲ್ಲಿಯೇ ಉಸಿರಾಡುವಂತೆ ಆಯಿತು. ಇಷ್ಟೆಲ್ಲ ಆದ ಮೇಲೆ ಊರೊಳಗೆ ಗಂಡು ಮಕ್ಕಳ ಅಪ್ಪ, ಅವ್ವಂದಿರು, ಇನ್ನಿತರ ಬಂಧು ಬಳಗದವರು ಮಾದೇವಿಯೇನೋ ನೋಡಲು ಅಂದಚಂದವಾಗಿರುವಳು, ಆದರೆ ಕೆಟ್ಟುಹೋದ ಪದಾರ್ಥವಾಗಿರುವುದರಿಂದ ತಮ್ಮ ಮನೆಗೆ ತಂದುಕೊಳ್ಳುವಂತಿಲ್ಲ, ಇದರ ಮೇಲೆ ಹೆಣ್ಣುಗಳಿಗೇನು ಲೋಕದಲ್ಲಿ ಲೆಕ್ಕವಿಲ್ಲದಷ್ಟಿವೆ ಎಂದು ಮಾತಾಡಿಕೊಂಡರು.

ಈ ನಡುವೆ ಊರೊಳಗೆ ವಿರೂಪಾಕ್ಷಿಯ ಮದುವೆ ಬೀಗ ಬೀಗರು ಮಾತಾಡಿಕೊಂಡಂತೆ ವಿಜೃಂಭಣೆಯಿಂದ ನಡೆದು, ಬೀದಿಗಳಲ್ಲಿ ಹೆಣ್ಣು ಗಂಡಿನ ಮೆರವಣಿಗೆಯ ಸಂಭ್ರಮ ನೋಡುತ್ತ ನಿಂತ ಮಾದೇವಿ, ತನ್ನನ್ನು ಪ್ರೀತಿಸುವಾಗಲೇ ಈ ವಿರೂಪಾಕ್ಷಿಗೆ ಹೇಳಿದ್ದೆ, ನಿನಗಿಂತಲೂ ಸಿರಿವಂತರ ಮನೆಯಲ್ಲಿ ಲಗ್ನವಾಗು ಎಂದು, ಏನಾದರಾಗಲಿ ನನ್ನನ್ನು ನಂಬಿಕೊಂಡಿದ್ದರೆ ಹಾಳಾಗುತ್ತಿದ್ದ, ಇಷ್ಟು ಹೊತ್ತಿಗೆ ಪೇಟೆಯಲ್ಲಿ ಕೂಲಿ ಮಾಡಿಯೇ ನನ್ನ ಸಾಕಬೇಕಿತ್ತು. ಸಿರಿವಂತರ ಮನೆಯವನನ್ನು ಕರೆದುಕೊಂಡು ಹೋಗಿ ಪೇಟೆಯಲ್ಲಿ ಕೂಲಿ ಮಾಡಿಸುತ್ತಿದ್ದಾಳೆಂಬ ಮಾತು ತಪ್ಪಿತು. ಇನ್ನು ವಿರೂಪಾಕ್ಷಿ ಚೆನ್ನಾಗಿರುತ್ತಾನೆ ಅಂದುಕೊಂಡಳು. ಹೀಗೆ ಏನೇನೋ ಯೋಚಿಸುತ್ತ ಬೀದಿ ಜಗಲಿಯ ಕಂಭ ತಬ್ಬಿ ನಿಂತುಕೊಂಡಿದ್ದವಳಿಗೆ ಅರಿವಿಲ್ಲದೆಯೇ ಎದೆಯಾಳದಿಂದ ಕಾಲುವೆ ತೋಡಿಕೊಂಡು ಬಂದ ನೀರು ಕಣ್ಣುಗಳ ಮಾರ್ಗವಾಗಿ ಹರಿಯುತ್ತಿತ್ತು. ಇದ್ದಕ್ಕಿದ್ದಂತೆ ಅವಳ ತಲೆಯಲ್ಲಿ ಒಂದು ಹೊಸ ಆಸೆ ಅಂಕುರಿಸಿತು. ಯಾವತ್ತಾದರೂ ವಿರೂಪಾಕ್ಷಿ ಆಕಸ್ಮಾತ್ತಾಗಿ ತನ್ನನ್ನು ಹುಡುಕಿಕೊಂಡು ಬಂದು ಎರಡನೇ ಹೆಂಡತಿಯಾಗಿ ಇರು ಅಂತ ಕೇಳಬಹುದೇ ಅಂದು ಕೊಂಡಳು. ಹಾಗೇನಾದರೂ ಕೇಳಿದರೆ 'ನೀನು ಲಗ್ನವಾಗಿರುವವಳಿಗೆ ದ್ರೋಹ ಬಗೆಯಲು ನಾನು ತಯಾರಿಲ್ಲ' ಎಂದು ಹೇಳಿಬಿಡಲು ತೀರ್ಮಾನಿಸಿದಳು.

ಹೇಗೋ ಎಂತೋ ಕೆಟ್ಟುಹೋದ ಮಗಳನ್ನು ಮನೆಯಲ್ಲಿ ಇಟ್ಟುಕೊಳ್ಳುವುದೂ ಒಂದು ಬಗೆಯಲ್ಲಿ ಸರಿಯಲ್ಲವೆಂದು ಯೋಚಿಸಿದ ಮಾದೇವಿಯ ಅಪ್ಪ ಕೊನೆಗೂ ಒಂದು ಗಂಡು ಹುಡುಕಿದ. ಆ ಗಂಡು ಊರ ಹಿರೀಕರಾದ ದೊಡ್ಡ ತಮ್ಮಯ್ಯನವರ ಹಟ್ಟಿಹಿಂದಲ ದನ ಕಾಯ್ದುಕೊಂಡಿದ್ದ ಪಾಲಯ್ಯ. ಈ ಪಾಲಯ್ಯನನ್ನು ಮಾದೇವಿ ನೋಡಿದಳೋ ಬಿಟ್ಟಳೋ, ಒಪ್ಪಿದಳೋ ಇಲ್ಲವೋ ಅಂತೂ ಒಂದು ದಿನ ಅವಳಿಗೂ ಅವನಿಗೂ ಊರಾಚೆಯ 'ಆಂಜನೇಯನ ಗುಡಿಯಲ್ಲಿ ಗಂಡನನ್ನು ಬಿಟ್ಟವಳಿಗೋ, ಹೆಂಡತಿಯನ್ನು ಬಿಟ್ಟವನಿಗೋ ಕೂಡಾವಳಿ ಆಗುವ ರೀತಿಯಲ್ಲಿ ಲಗ್ನವಾಯಿತು. ಬೀದಿಯ ಜನವಂತೂ ಇವರಿಬ್ಬರೂ ಕೂಡಿದ್ದನ್ನು ಕಂಡು ' ಬುಡಯ್ಯ ಹಿಟ್ನ ಮುದ್ದೆ ಮ್ಯಾಲೆ ನಿಂಬೆಣ್ಣ ಮಡಗದಂಗಾಯ್ತು' ಅಂದು ನಗಾಡಿದರು.